

ಬಡತನವ ಹೊದ್ದುಕೊಂಡಿರುವ ಚಂದ್ರು ನನ್ನ ಪ್ರಕಾರ ಹುಟ್ಟಾ ನ್ಯಾಚುರಲಿಸ್ಟ್. ನಾವೆಲ್ಲಾ ಆಮೇಲೆ ಮುಗಿಬಿದ್ದು ಈ ಹವ್ಯಾಸ ರೂಢಿಸಿಕೊಂಡವರು. ಆದರೆ ಕೆಲವರಿಗೆ ಇದು ಜನ್ಮಜಾತವಾಗಿ ಒಂದು ಬಳುವಳಿಯಾಗಿ ಒದಗಿ ಬಂದಿರುತ್ತದೆ. ಚಂದ್ರು ಈ ಅದೃಷ್ಟದ ಸಾಲಿಗೆ ಸೇರಿದವನು.

ಒಂದು ದಿನ ಅಚಾನಕ್ಕಾಗಿ ತುಮಕೂರಿನ ಡಾ.ಉಮಾಶಂಕರ್ ಇವನ ನಂಬರ್ ಕೊಟ್ಟು, 'ಮಾತಾಡಿ ಸರ್' ಎಂದರು. ಅವನ ಜೊತೆ ಸುಮಾರು ಹೊತ್ತು ಮಾತಾಡಿದೆ. ನಮ್ಮ ಲೆವೆಲ್ಲಿಗೆ ಮ್ಯಾಚ್ ಆಗುವ, ನಮ್ಮಷ್ಟೇ ಹಾಳಾದ ಇವನನ್ನು ಬಿಡಬಾರದು ಎಂದೆನಿಸಿತು. ಈತ ನನಗಿಷ್ಟವಾದ ಪಕ್ಷಿಯ ಗೂಡೊಂದನ್ನು ಪತ್ತೆ ಹಚ್ಚುವ ಕೆಲಸದಲ್ಲಿ ಮಗ್ನನಾಗಿದ್ದ. ತನ್ನ ಪರಿಸರದಲ್ಲಿ ಸಿಗುವ ಅಷ್ಟೂ ಪ್ರಾಣಿ ಪಕ್ಷಿಗಳ ಬಗ್ಗೆ ವಿವರವಾಗಿ ಮಾತಾಡಿದ. 'ಅಯ್ಯೋ ಮಾರಾಯ. ಇವನ್ನೆಲ್ಲಾ ಹುಡುಕಿಕೊಂಡು ಮಹಾರಾಷ್ಟ್ರ, ರಾಜಸ್ತಾನ ಅಂತೆಲ್ಲ ಅಲೆದಾಡಿದೆವಲ್ಲೋ! ನೋಡು ಇವೆಲ್ಲಾ ನಮ್ಮ ಪಕ್ಕದ ಜಿಲ್ಲೆಯಲ್ಲೇ ಇದ್ದಾವೆ. ನಾ ಹೇಳಿದ ಪಕ್ಷಿಯ ಗೂಡು ಕಂಡರೆ ಪೋನು ಮಾಡು. ಹಾರಿ ಬರುತ್ತೇನೆ' ಎಂದು ಪೋನಿಟ್ಟೆ. ಇದಾದ ನಾಲ್ಕೇ ದಿನದಲ್ಲಿ ಅವನು ಸಡಗರದಿಂದ, 'ಬಂದು ಬಿಡಿ ಸರ್' ಎಂದಾಗ ಆನಂದ ಉಕ್ಕಿ ಹರಿದು; ಶಿಕಾರಿ ಸಂಗಾತಿ ಶ್ರೀಕಾಂತರನ್ನು ಎಳಕೊಂಡು ರಾಣೆಬೆನ್ನೂರಿನ ಕಡೆ ಹೊರಟೇ ಬಿಟ್ಟೆ.

ನಾ ನೋಡ ಬಯಸಿದ್ದ ಪಕ್ಷಿಯ ಹೆಸರು ಏಷಿಯನ್ ಪ್ಯಾರಾಡೈಸ್ ಫ್ಲೈ ಕ್ಯಾಚರ್ ಎಂದು. ಕನ್ನಡದಲ್ಲಿ ಇದನ್ನು ಬಾಲದಂಡೆ ಹಕ್ಕಿ ಎಂದು ಕರೆಯಲಾಗುತ್ತೆ. ಮಲೆನಾಡಿನಲ್ಲಿ ಕೂಡ ಈ ಪಕ್ಷಿ ಸಿಗುತ್ತದೆಯಾದರೂ ದಟ್ಟಕಾಡಿನಲ್ಲಿ ಇದರ ಗೂಡು ಹುಡುಕುವುದು ಕಷ್ಟದ ಕೆಲಸ. ಇದರಲ್ಲಿ ಗಂಡು ಹಕ್ಕಿಯ ಬಾಲ ಉದ್ದಕ್ಕಿದ್ದು ಹಾರುವಾಗ ಟೇಪಿನ ರೀತಿ ಗಾಳಿಗೆ ಬಿದ್ದು ಉಯ್ಯಾಲೆಯಾಡುತ್ತದೆ. ಈ ಪಕ್ಷಿಯ ಸೊಬಗು ಇರುವುದೇ ಇದರ ಉದ್ದ ಬಾಲದ ಲಾವಣ್ಯದಲ್ಲಿ. ಇವುಗಳಲ್ಲಿ ಬಿಳಿ ಮತ್ತು ನಸುಗೆಂಪು ಬಣ್ಣದ ಎರಡು ತಳಿಗಳಿದ್ದಾವೆ. ಬಿಳಿ ಬಣ್ಣದ ಪ್ಯಾರಾಡೈಸ್ ಗೂಡು ಸಿಗುವುದು ಕೆಲವು ಕಡೆ ಮಾತ್ರ. ಬೆಂಗಳೂರಿನ ಸ್ಕೂಲ್ ಆಫ್ ವ್ಯಾಲಿ ಹಾಗೂ ರಾಮನಗರ ಮತ್ತು ನಂದಿ ಬೆಟ್ಟದಲ್ಲಿ ಇವು ಹೆಚ್ಚಾಗಿ ಸಿಗುತ್ತವೆ ಎಂದು ಕೇಳಿದ್ದೇನೆ.

ಚಂದ್ರು ನಮಗಾಗಿ ಅಲ್ಲಿ ಕಾಯುತ್ತಿದ್ದ. ತೀರಾ ಬೆಳಗ್ಗೆಯೇ ಅವನು ಹೇಳಿದ ಸ್ಥಳ ತಲುಪಿದೆವು. ಹಳ್ಳಿಯಿಂದ ಎರಡು ಮೈಲು ದೂರದ ತಾವಿನಲ್ಲಿ